ಶ್ರೀ ಎ. ಲಕ್ಷ್ಮಿಸಾಗರ್ (ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು).—

ಅ) ಕೆಲಸದ ಒತ್ತಡ ಮತ್ತು ರಾಜ್ಯದ ಆರ್ಥಿಕ ಅನುಕೂಲತೆಗಳನ್ನು ನೋಡಿಕೊಂಡು ಉಚ್ಚ ನ್ಯಾಯಾಲಯದ ಶಿಫಾರಸಿನ ಮೇರೆಗೆ ನ್ಯಾಯಾಲಯಗಳನ್ನು ಸ್ಥಾಪಿಸುವುದು ಸರಕಾರದ ಉದ್ದೇಶವಾಗಿದೆ.

ಆ) ಪ್ರಸ್ತುತದಲ್ಲಿ ಸಾಕಷ್ಟು ಕೆಲಸವಿಲ್ಲದಿರುವುದರಿಂದ ಕಲಘಟಗಿಯಲ್ಲಿ ನ್ಯಾಯಾಲಯವನ್ನು ಸ್ಥಾಪಿಸುವ ಬಗೆಗೆ ಪ್ರಸ್ತಾಪವಿರುವುದಿಲ್ಲ.

ಕೈಗಾರಿಕಾ ಇಲಾಖಾ ವತಿಯಿಂದ ಖಾದಿ ಗ್ರಾಮೋದ್ಯೋಗ ಇಲಾಖಾ ವತಿಯಿಂದ

ಬಯೋಗ್ಯಾಸ್ ಬಗ್ಗೆ.

೪೮೦. ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ).—ಮಾನ್ಯ ಬಾರಿ ಹಾಗೂ ಮಧ್ಯಮ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ

ಅ) ಖಾದಿ ಗ್ರಾಮೋದ್ಯೋಗ ಇಲಾಖೆಯಿಂದ ಬಯೋಗ್ಯಾಸ್ ಮಂಜೂರು ಮಾಡಲಾಗಿದೆಯೇ (ತಂಮಕೂರು ಜಿಲ್ಲೆಯ ವಿವರ ಒದಗಿಸುವುದು), ಹಾಗೂ ಅವು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿದೆಯೆ,

ಆ) ಸದರಿ ಬಯೋಗ್ಯಾಸ್ ಮಂಜೂರಾತಿಯ ಬಗ್ಗೆ ಪಡೆದ ಸಾಲದ ವಂರುಪಾವತಿಗೆ ವಿಧಿಸಿರುವ ಷರತ್ತುಗಳೇನು ?

ಶ್ರೀ ಆರ್.ವಿ. ದೇಶಪಾಂಡೆ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲಾ.

ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ಸುಗಳು ಪ್ರಯಾಣ ದರ ಏರಿಸುವ ಬಗ್ಗೆ.

೪೮೧ ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ಸಾರಿಗೆ ಹಾಗೂ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸಿಸುವರೆ ?

(ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ಸುಗಳ ಪ್ರಯಾಣ ದರವನ್ನು ಏರಿಸುವುದಕ್ಕೆ ಕಾರಣಗಳೇನು ?

(ಆ) ಸದರಿ ಸಂಸ್ಥೆಯಲ್ಲಿ ಭರಿಸುವ ನಷ್ಟದ ಬಗ್ಗೆ ತೀರ್ಮಾನ ಕೈಗೊಂಡಿದ್ದಲ್ಲಿ ನಷ್ಟದ ವಿವರಗಳನ್ನು ತಿಳಿಸುವಿರಾ ?

(ಇ) ಮೇಲಿನ ಸಂಸ್ಥೆಯಲ್ಲಿ ನಷ್ಟವನ್ನು ಭರಿಸಲು ಇತರ ಯಾವ ತೀರ್ಮಾನ ಕೈಗೊಳ್ಳಲಾಗಿದೆ ?

ಶ್ರೀ ಎಂ. ಪಿ. ಪ್ರಕಾಶ್ (ಸಾರಿಗೆ ಹಾಗೂ ವಸತಿ ರಾಜ್ಯ ಮಂತ್ರಿಗಳು).—

(ಅ) ಭಾಸಿಗಳು, ವಾಹನಗಳ ಕವಚ ನಿರ್ವಾಣ, ಇಂಧನ, ಟೈರುಗಳು ಹಾಗೂ ಇನ್ನಿತರ ವಸ್ತುಗಳ ಬೆಲೆಯು ಏರಿರುತ್ತದೆ. ಆಲ್ಲದೆ ಸಂಸ್ಥೆಯ ನೌಕರರ ವೇತನ ಪರಿಷ್ಕರಣ ಮತ್ತು ಮೋಟಾರು ವಾಹನ ತೆರಿಗೆಯ ಹೆಚ್ಚಳಗಿಂದಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಕಾರ್ಯಚರಣೆ ವೆಚ್ಚವು ಏರುತ್ತಿರುತ್ತಿದೆ.

ಸಂಸ್ಥೆಯು ಈ ಎಲ್ಲಾ ಬೆಲೆಗಳ ಹೆಚ್ಚಳವಿದ್ದರೂ ಕೂಡ ಪ್ರಯಾಣ ದರವನ್ನು ಪರಿಷ್ಕರಿಸಿರಲಿಲ್ಲ. ಆದ್ದರಿಂದ ಮೇಲ್ಕಂಡ ಕಾರಣಗಳಿಂದಾಗಿ ಬಸ್ಸುಗಳ ಪ್ರಯಾಣ ದರವನ್ನು ಪರಿಷ್ಕರಿಸಲು ಉದ್ದೇಶಿಸಲಾಗಿದೆ.